ಪಟವನ್ನು ಕರಿಮನೇ ತನ್ನ ಗಾಡಿಯಲ್ಲಿಟ್ಟು ಮೆರವಣಿಗೆ ಹೊರಡಿಸುತ್ತಿದ್ದ. ಒಟ್ಟಿನಲ್ಲಿ ಯಾವ ತಂಟೆ ತಕರಾರೂ ಇಲ್ಲದೇ ಜನ ಬಹಳ ಸಾಮರಸ್ಯದಿಂದ ಇದ್ದರು. ಏನೇ ನಡೆದರೂ ಅದು ತಮ್ಮದೇ ಎಂಬಂತೆ ಪಾಲ್ಗೊಂಡು ಸಂಭ್ರಮಿಸುತ್ತಿದ್ದರು.

ಚರ್ಚು ಇತ್ತೀಚೆಗೆ ಹೊಸದಾಗಿ ತಲೆ ಎತ್ತಿತ್ತು. ಅಲ್ಲಿಗೆ ಫಾದರ್ ಇನ್ನೂ ಬಂದಿರಲಿಲ್ಲ. ಫಾದರ್ ಶಿಷ್ಯನಾಗಿದ್ದ ಡಿಸೋಜಾ ಆಗಲೇ ಬಂದು ಫಾದರ್ ಥರನೇ ಓಡಾಡುತ್ತ ತನಗೆ ವಹಿಸಿದ ಕೆಲಸವನ್ನು ನಿಷ್ಠೆಯಿಂದ ಮಾಡುತ್ತಿದ್ದರು. ಕಲ್ಲನ್ನೂ ಮಾತನಾಡಿಸುವಷ್ಟು ಮಾತುಗಾರ. ‘ಎಲ್ಲರೊಳಗೊಂದಾಗು’ ಎಂಬಂತೆ ಎಲ್ಲರೊಡನೆ ಅವರವರ ಸ್ವಭಾವಕ್ಕೆ, ಅಗತ್ಯಗಳಿಗೆ ತಕ್ಕಂತೆ ಹೊಂದಿಕೊಂಡು ‘ಸೋಜಪ್ಪ’ನಾಗಿದ್ದರು. ಚರ್ಚಿನ ಕೆಲಸಗಳು ಇನ್ನೂ ಬಾಕಿ ಉಳಿದಿದ್ದವು. ಹಿಂದೆ ತೋಡಿದ್ದ ಹೊಂಡ ಹಾಗೇ ಇತ್ತು. ಸುತ್ತ ಅನೇಕ ಚಿಕ್ಕಪುಟ್ಟ ಬಂಡೆಗಲ್ಲುಗಳು.. ಸಣ್ಣ ಕಲ್ಲುಗಳ ಸಮೂಹವೇ ಇತ್ತು. ಮಳೆಗಾಳಿಗೆ ಆಗಾಗ ಒಂದೊಂದೇ ಹೊಂಡದೊಳಗೆ ಉರುಳುತ್ತಿದ್ದವು. ಹಳ್ಳಿಯಲ್ಲಿ ಮೂರೇ ಮೂರು ಅಂಗಡಿಗಳಿದ್ದು ಅದರಲ್ಲಿ ಶೆಟ್ಟರ ಅಂಗಡಿ ತುಸು ದೊಡ್ಡದು. ಎಲ್ಲ ಸಾಮಾನುಗಳು ದೊರೆತರೂ ಬೆಲೆ ಜಾಸ್ತಿ. ಇನ್ನೆರೆಡು ಚಿಕ್ಕ ಅಂಗಡಿಗಳಲ್ಲಿ ಚಿಲ್ಲರೆ ವ್ಯಾಪಾರ ಬಲು ಜೋರು. ಮೊಟ್ಟೆ, ಫೇಸ್ ಪೌಡರ್, ಕ್ರೀಮುಗಳ ಜೊತೆಗೆ ಒಂದು ರೂಪಾಯಿನ ಟೀ ಪುಡಿ, ಕಾಫಿ ಪುಡಿ, ಸಕ್ಕರೆ ಮುಂತಾದವುಗಳು ದೊರೆತು ದೇವಪ್ಪ, ನಂಜುಂಡ, ಮಾದೇವಿಯಂಥವರನ್ನು ಸಾಕುತ್ತಿದ್ದವು.

ಮೇಸ್ತ್ರಿ ಕೆಲಸ ಇದ್ದಾಗಲೆಲ್ಲ ಜನರನ್ನು ಲಾರಿಯಲ್ಲಿ ತುಂಬಿ ಊರಿಂದೂರಿಗೆ ಕರೆದೊಯ್ಯುತ್ತಿದ್ದ. ಹಾಗೆ ಹೋಗುತ್ತಿದ್ದವರಲ್ಲಿ ನಂಜುಂಡ, ದೇವಪ್ಪರೂ ಸೇರಿದ್ದರು. ಮಾದೇವಿ ಗೌಡರ ಮನೆಯಲ್ಲಿ, ಶೆಟ್ಟರ ಮನೆಯಲ್ಲಿ, ಕಸಮುಸುರೆ, ಬಟ್ಟೆ ತೊಳೆಯುವ ಕೆಲಸ ಮಾಡುತ್ತಿದ್ದಳು. ದೇವಪ್ಪನ ಹೆಂಡತಿ ಕೋಳಿ ಸಾಕಿ ಮೊಟ್ಟೆಗಳನ್ನು ಮಾರುತ್ತಿದ್ದಳು. ಅಂತೂ ಇಬ್ಬರೂ ಮನೆಯಲ್ಲಿ ಎರಡು ಹೊತ್ತು ಹಿಟ್ಟು ಕಾಣಿಸುತ್ತಿದ್ದರು. ಇಲ್ಲವಾದಲ್ಲಿ ಗಾರೆ ಕೆಲಸದಲ್ಲಿ ದೊರೆತ ಅರ್ಧ ದುಡ್ಡನ್ನು ಸಾರಾಯಿಗೇಹಾಕುತ್ತಿದ್ದನಂಜುಂಡ, ದೇವಪ್ಪನಂಥವರ ಮನೆ ನಡೆಯುವುದೇ ಕಷ್ಟವೆಂಬಂಥ ಪರಿಸ್ಥಿತಿ. ನಂಜುಂಡ ಮಾದೇವಿಯ ಬೈಗುಳ ಕೇಳುತ್ತ ತಾನೂ ಕೂಗಾಡುತ್ತ ಕೇರಿಯವರಿಗೆ ಪುಕ್ಕಟೆ ಮನರಂಜನೆ ಒದಗಿಸುತ್ತಿದ್ದ. ಇಂತಹ ಕಾರ್ಯಕ್ರಮಗಳು ನಿತ್ಯ ನೇರಪ್ರಸಾರದಲ್ಲೇ ಲಭ್ಯವಾಗುತ್ತಿದ್ದವು. ಟಿವಿಯಲ್ಲಿನ ಧಾರಾವಾಹಿಗಳನ್ನು ಬಿಟ್ಟು ಜನರೆಲ್ಲ ಗುಂಪಾಗಿ ನೇರಪ್ರಸಾರವನ್ನು ನೋಡುತ್ತಿದ್ದರು. ಏಕೆಂದರೆ ಇಲ್ಲಿ ಮರುಪ್ರಸಾರದ ಸಾಧ್ಯತೆ ಕಡಿಮೆ. ಒಮ್ಮೊಮ್ಮೆ ಪೊರಕೆ, ಕೋಲು, ಚಪ್ಪಲಿಯೇಟುಗಳು ಕಾವೇರಿಸಿದಾಗ ನೆರೆಯ ಹಿರಿಯರು ಬಂದು ಬಿಡಿಸಬೇಕಾಗುತ್ತಿತ್ತು. ಇದ್ದುದರಲ್ಲಿ ಮಾದೇವಿಯ ಮನೆಯಲ್ಲಿ ಗಲಾಟೆ ಕಮ್ಮಿ. ಏಕೆಂದರೆ ಮಗ ಬಸನಿಂಗ ಐ.ಟಿ.ಐ. ಕಲಿಯಲು ದಾವಣಗೆರೆಯ ಫ್ರೀ ಹಾಸ್ಟೆಲಿನಲ್ಲಿದ್ದ. ಕಾಲೇಜಿನಲ್ಲೂ ಕನಿಷ್ಠ ಫೀ ಇದ್ದರೂ ಹೊಂದಿಸಿ ಕೊಡುವಲ್ಲಿ ಮಾದೇವಿ ಒದ್ದಾಡುತ್ತಿದ್ದಳು. ಮನೆಯ ಯಾವ ಜವಾಬ್ದಾರಿಯನ್ನೂ ತನ್ನದೆಂದುಕೊಳ್ಳದೇ ಕೆಸರಿನಿಂದ ಮೇಲೆದ್ದ ಕಮಲದಂತೆ ಸಂಸಾರಕ್ಕೆ ಅಂಟಿಯೂ ಅಂಟದಿರುವ ಗಂಡನ ಮೇಲೆ ಮಹಾಕೋಪ ಅವಳಿಗೆ. ಅದಕ್ಕೆ ಈ ಬಾರಿ ಕಡಕ್ಕಾಗಿ, ‘ಫೀಸ್ ದುಡ್ಡು.. ಐನೂರು ರುಪಾಯಿ ನೀನೇ ಹೊಂದಿಸು’ಎಂದಿದ್ದಳು. ಅವನು ತಂದಿಟ್ಟ ಐನೂರರ ನೋಟು ಅವಳ ಕೋಪ ತಣಿಸಿದ್ದೂ ನಿಜವೇ.

ಬಸನಿಂಗ ಯಾವಾಗಲೊ ಬಂದಾಗ ಪ್ರೀತಿ ಉಕ್ಕೇರುತ್ತಿತ್ತು ಮಾದೇವಿಗೆ. ನಂಜುಂಡನಿಗೆ ರಾಶಿ ಪ್ರೀತಿ ಇದ್ದರೂ ತೋರಿಸಿಕೊಳ್ಳುತ್ತಿರಲಿಲ್ಲ. ಜೊತೆಗೆ ಇಬ್ಬರಿಗೂ ಮಗನ ಮೇಲೆ ಭಯ ಮಿಶ್ರಿತ ಗೌರವಾದರಗಳೂ ಇದ್ದವು. ತಮ್ಮಂತೆ ಹೆಬ್ಬೆಟ್ಟಾಗದೇ ಓದುತ್ತಿದ್ದಾನೆ.. ಮುಂದೆ ತಮ್ಮನ್ನು ಸಾಕುವವನು. ತಮಗೆ ಗೊತ್ತಾಗದೇ ಇರುವ ಧಾರ್ಮಿಕ, ರಾಜಕೀಯ, ವ್ಯವಹಾರದ ಮಾತುಗಳನ್ನಾಡುತ್ತಾನೆ.. ಮುಂದೆ ದೊಡ್ಡ ಮನುಷ್ಯನಾಗುತ್ತಾನೆ..ಎಂಬ ನಂಬಿಕೆ ಹಿರಿದಾಗಿತ್ತು. ಮಾದೇವಿಗಂತೂ ಅನೇಕ ಸರ್ತಿ ಗರ್ಭಪಾತಗಳಾಗಿ ಉಳಿದದ್ದೇ ಒಂದು ಕುಡಿ. ಮಡಿಲಲ್ಲಿ ಮಲಗಿಸಿಕೊಂಡು ತಲೆ ಸವರುತ್ತ, ‘ಓದೋದು ಜಾಸ್ತಿ ಇರತೈತೇನೋ? ಕಷ್ಟವಾಗತ್ತೈತಾ ಮಗಾ?’ ಎಂದು ಕೇಳುತ್ತಿದ್ದಳು. ಅವನೂ ‘ಹ್ಞೂಂ.. ಕನವ್ವ. ಆದ್ರೆ ಚಿಂತೆ ಮಾಡ್ಬೇಡ. ಚೆನ್ನಾಗಿ ಓದ್ತಾ ಇವ್ನಿ. ಪಾಸಾದ ಮ್ಯಾಕೆ ನೋಕರಿಯೂ ಅಲ್ಲೇ ಸಿಗಬೋದು’ ಎನ್ನುತ್ತಿದ್ದ. ಮಾದೇವಿಗೆ ಹೊಟ್ಟೆಯಲ್ಲಿ ಹಾಲು ಹುಯ್ದಂತಾಗುತ್ತಿತ್ತು.